ಸಿಸಿ ನಂ. 277/2023 ಪಿಡಬ್ಲೂ :1

ದಿನಾಂಕಃ 24-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರ ಅಡಿಯಲ್ಲಿ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಪಿ ಜಿ ಹೆಚ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಅಧಿಕಾರ ಪತ್ರದ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ಚೆಕ್ ನ್ನು ನಿಪಿ-2 ಎಂದು, ಆರೋಪಿಯ ಸಹಿಯನ್ನು ನಿಪಿ-2(ಎ) ಎಂದು, ಬ್ಯಾಂಕಿನ ಹಿಂಬರಹವನ್ನು ನಿಪಿ-3 ಎಂದು, ವಕೀಲರ ಕಚೇರಿಯ ನೋಟಿಸಿನ ಪ್ರತಿಯನ್ನು ನಿಪಿ-4 ಎಂದು, ಅಂಚೆ ರಸೀದಿ ನಿಪಿ-5 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-6 ಎಂದು, ಸಾಲದ ಅರ್ಜಿಯ ಯಥಾ ನಕಲನ್ನು ನಿಪಿ -7 ಎಂದು, ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ -8 ಎಂದು, ಡಿಮಾಂಡ್ ಫ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ-9 ಎಂದು, ಆರೋಪಿ ಸಾಲದ ಹಣವನ್ನು ಪಡೆದ ಪಾವತಿಯ ಯಥಾ ನಕಲನ್ನು ನಿಪಿ-10 ಎಂದು, ನೋಟಿಸಿನ ಪ್ರತಿಯನ್ನು ನಿಪಿ-11 ಎಂದು, ಸಾಲದ ಖಾತೆ ಉತಾರ ಸರ್ಟಿಫಿಕೇಟ್ ನೊಂದಿಗೆ ನಿಪಿ-12 ಎಂದು ಗುರುತಿಸಲಾಯಿತು.

(ಸಾಕ್ಷಿ ನಿಪಿ-7 ರಿಂದ ನಿಪಿ-12 ರವರೆಗಿನ ದಾಖಲಾತಿಗಳ ಅಸಲು ಪ್ರತಿಗಳನ್ನು ಹಾಜರು ಪಡಿಸಿದ್ದು ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಅಸಲು ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.